## ಕಳೆದ ಸಂಚಿಕೆಯಲ್ಲಿ



ಸೀತಾಪುರದ ಗುಡ್ಡದ ಮೇಲೆ ನಿಂತ ಮೊಬೈಲ್ ಕಂಪನಿಯ ಟವರ್‌ನ ಕಂಬ, ಊರನ್ನು ಆಧುನಿಕ ಸಂದರ್ಭಕ್ಕೆ ಕರೆದೊಯ್ಯುವ ಆಹ್ವಾನದಂತೆ ಕಾಣಿಸತೊಡಗಿತು. ಕಾಟೇಜ್‌ಗಳನ್ನು ನಿರ್ಮಿಸುವ ಕೆಲಸ ಆರಂಭವಾದಂತೆ, ಸೀತಾಪುರದಲ್ಲಿ ಹೊರಗಿನವರ ಓಡಾಟ ಹೆಚ್ಚತೊಡಗಿತು. ಊರಿನ ಜನರಿಗೆ, ಹೊಸ ಬದಲಾವಣೆಗಳ ಕುರಿತ ಕಾತರ. ಕೆಲವರಿಗೆ ಒಂದಷ್ಟು ಕಾಸು ಮಾಡಿಕೊಳ್ಳುವ ಆಸೆ. ಉಚಿತವಾಗಿ ಸ್ಮಾರ್ಟ್‌ಫೋನ್ ಪಡೆದವರು ಇಂಟರ್ನೆಟ್ ಮೂಲಕ 'ವಿಶ್ವವಿಹಾರ' ಮಾಡತೊಡಗಿದರು. ಇದೇ ಸಮಯಕ್ಕೆ ಸೀತಾಪುರ ಎನ್ನುವ ಪುಟ್ಟ ಊರು ಇಂಟರ್ನೆಟ್ ಮೂಲಕ ತನ್ನನ್ನು ವಿಶ್ವದೆದುರು ತೆರೆದುಕೊಳ್ಳತೊಡಗಿತು. ಸೀತಾಪುರದ ಹೊಸ ಮನ್ವಂತರಕ್ಕೆ ಸಾಕ್ಷಿಯಾಗುವಂತೆ ಸಂಜಯ್ ರಿಯಾಲಿಟಿ ಶೋ ಮಾದರಿಯಲ್ಲಿ ಸ್ಪರ್ಧೆ ನಡೆಸಿ ಇಬ್ಬರನ್ನು ಆಯ್ಕೆ ಮಾಡಿದ. ಹೊಸ ಆಟದ ಗುಂಗು ಊರಿಗೆ ಊರನ್ನೇ ಆವರಿಸಿಕೊಂಡಿತು.

ನವ್ಯಳಿಗೆ ಇದು ಅದ್ಭುತಲೋಕವಾಗಿ ಕಂಡಿತು. ಸೀತಾಪುರದ ಕಾಡಿನ ಗಿಡಮರಗಳು, ಬಿಳಲುಗಳು, ಹಕ್ಕಿ ಹುಳಗಳನ್ನು ತನ್ನ ಕ್ಯಾಮೆರಾದಲ್ಲಿ ಸೆರೆಹಿಡಿದಳು.

ಈ ಕಾಡು ಸಂಪೂರ್ಣ ದಕ್ಷಿಣ ಕನ್ನಡದ 'ಬಯೋ ಡೈವರ್ಸಿಟಿ'ಯ ಪ್ರತೀಕ ಎಂದು ನವ್ಯ ಕಾಡಿನ ಹೊರಗೆ ನಿಂತು ಭಾಷಣ ಮಾಡಿ ಅದನ್ನು ರೆಕಾರ್ಡ್ ಮಾಡಿದಳು. ಯಾವುದಾದರೂ ವಿದೇಶೀ ಯೂನಿವರ್ಸಿಟಿ ಇದರ ಸ್ಟಡಿ ಮಾಡಲು ಬಯಸಿದರೆ ಸೀತಾಪುರ ಇದಕ್ಕೆ ಅವಕಾಶ ನೀಡುವುದಾಗಿ ಹೇಳಿದಳು.

ಇವೆರಡೂ ವಿಷಯ ಸೋಶಿಯಲ್ ಮೀಡಿಯಾದಲ್ಲಿ ಪ್ರಕಟವಾದವು. ಜನ ಸೀತಾಪುರದ ಕಾಡುಗಳ ಬಗ್ಗೆ ಮಾತಾಡಿಕೊಂಡರು. ಪ್ರಾಣಿಗಳಿಗೆ ನಮಗಿಂತಲೂ ಮೊದಲು ಪ್ರಕೃತಿ ವೈಪರೀತ್ಯ ಹೇಗೆ ಗೊತ್ತಾಗುತ್ತದೆ ಎಂಬ ಬಗ್ಗೆ ಚರ್ಚೆಯಾಯಿತು.

ಸಂದೇಶ್ ಉತ್ತಮ ಮಾತುಗಾರನಾ? ಅಥವಾ ನವ್ಯಳಾ? ಅಂತ ಜನ ಸೋಶಿಯಲ್ ಮೀಡಿಯಾದಲ್ಲಿ ಚರ್ಚೆ ಮಾಡತೊಡಗಿದರು.

ನವ್ಯಳ ಹತ್ತಿರ ಆಶಾ 'ಬಯೋಡೈವರ್ಸಿಟಿ ಅಂದರೆ ಏನು ಹಾಗೂ ಅದು ಯಾಕೆ ಬೇಕು?' ಎಂದು ಕೇಳಿದಳು.

'ಬಯೋಡೈವರ್ಸಿಟಿ ಗೊತ್ತಿಲ್ವ? ಈ ಕಾಡಿನಲ್ಲಿರುವ ವಿವಿಧ ಸಸ್ಯ ಮತ್ತು ಪ್ರಾಣಿಗಳ ಅಧ್ಯಯನ ಮಾಡಿ ದಾಖಲಿಸುವುದನ್ನು ಬಯೋಡೈವರ್ಸಿಟಿ ಸ್ಟಡಿ ಅನ್ನುತ್ತಾರೆ. ಈ ನಮ್ಮ ಭೂಮಿಯಲ್ಲಿ ಇದ್ದ ಶೇ. 99.9 ಜೀವಜಾತಿಗಳು ಈಗಾಗಲೇ ಅಳಿಸಿಹೋಗಿವೆ. ಈಗ ಉಳಿದ ಶೇ. 0.1 ಜೀವಿಗಳೂ ಕೋಟಿಗಟ್ಟಲೆ ಸಂಖ್ಯೆಯಲ್ಲಿ ಇವೆ. ಇವುಗಳನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಆದ್ಯತೆ' ಎಂದಳು ನವ್ಯ.

ಆಶಾಳಿಗೆ ಆಶ್ಚರ್ಯ ಆಯಿತು. ಸೀತಾಪುರದ ಗುಡ್ಡೆ ಕಾಡನ್ನು ಉಳಿಸುವ ಬಗ್ಗೆ ಈವರೆಗೆ ಯಾರೂ ಮಾತಾಡಿದ್ದು ಅವರ ಗಮನಕ್ಕೆ ಬಂದಿರಲಿಲ್ಲ.

'ನವ್ಯ, ಕಾಡನ್ನು ಉಳಿಸುವುದು ಎಲ್ಲಾ ಸರಿ, ಆದರೆ ಯಾರು ಹಾಳು ಮಾಡ್ತಾರೆ? ಈವರೆಗೆ ನಮ್ಮೂರವರು ಯಾರೂ ಕಾಡಿನ ನಾಶಕ್ಕೆ ಬಂದಿಲ್ಲ' ಅಂದಳು.

ಅದಕ್ಕೆ ನವ್ಯ, 'ನೋಡು ಆಶಾ, ನಿಮ್ಮೂರಿನವರು ಈವರೆಗೆ ಕಾಡಿನ ಸುದ್ದಿಗೆ ಹೋಗಿಲ್ಲ ಅಂದ್ರೆ ಮುಂದೆ ಹೋಗುವುದಿಲ್ಲ ಅಂತ ಏನು ಗ್ಯಾರಂಟಿ? ನಾಳೆ ಹೊರಗಿನಿಂದ ಬಂದವರು ಕಾಡು ನಾಶ ಮಾಡುವುದಿಲ್ಲ ಅಂತ ಹೇಗೆ ಗೊತ್ತು? ಹಾಗಾಗಿ ಅದರ ಮೊದಲೇ ನಾವು ಕಾಡಿನ ರಕ್ಷಣೆ ಮಾಡಬೇಕು' ಅಂದಳು.

ಆಶಾಳಿಗೆ ಅದೂ ಅರ್ಥ ಆಗಲಿಲ್ಲ. 'ನವ್ಯ, ಯಾರು ನಮ್ಮ ಕಾಡು ಉಳಿಸುತ್ತಾರೆ? ಅಥವಾ ಇಲ್ಲಿರುವ ಗಿಡಮರಗಳ ಪ್ರಾಣಿಗಳ ದಾಖಲೀಕರಣ ಮಾಡಿದರೆ ಕಾಡು ಉಳಿಯುತ್ತದಾ?' ಎಂದು ಕೇಳಿದಳು.

ನವ್ಯಳಿಗೆ ಆಶಾಳ ಇಂಥ ಹೆಚ್ಚಿನ ಪ್ರಶ್ನೆಗಳಿಗೆ ಉತ್ತರ ಕೊಡುವುದು ಬೇಕಿರಲಿಲ್ಲ.

'ಆಶಾ, ಈ ಬಯೋಡೈವರ್ಸಿಟಿ ಸ್ಟಡಿ ಅಂದರೆ ಸೀತಾಪುರಕ್ಕೆ ಹೊರಗಿನ ಜನ ಇನ್ನು ಮುಂದೆ ಬರ್ತಾರೆ, ಅವರು ಇಲ್ಲಿ ಮನೆಯ ಟೆಂಟ್ ಹಾಕುತ್ತಾರೆ. ಅವರ ಜೊತೆ ಅವರ ಸಹಚರರು ಬರ್ತಾರೆ. ಕೆಲವು ಜನ ಪಿಎಚ್.ಡಿ. ಮಾಡುವವರು ಮುಂದೆ ಬರ್ತಾರೆ. ಸೀತಾಪುರದಲ್ಲಿ ಅಂಗಡಿ ಹೋಟೆಲ್‌ಗಳು ಬೆಳೆಯುತ್ತವೆ. ಸೀತಾಪುರದ ಬಗ್ಗೆ ಜಗತ್ತಿನಾದ್ಯಂತ ಪ್ರಚಾರ ಆಗುತ್ತದೆ. ಸರಿಯಾದ ರಸ್ತೆ ನಿರ್ಮಾಣವಾಗುತ್ತದೆ, ನಿರೀಕ್ಷಣಾಲಯ ತಲೆ ಎತ್ತುತ್ತದೆ. ಈ ಹಳ್ಳಿಯ ಮಂದಿಗೆ ಇಲ್ಲೇ ಕೆಲಸ ಸಿಗುತ್ತದೆ... ಒಟ್ಟಾಗಿ ಇಡೀ ಊರು ಅಭಿವೃದ್ಧಿಯಾಗುತ್ತದೆ' ಅಂದಳು.

ಆಶಾಳಿಗೆ ಈಗ ಅರ್ಥವಾಯಿತು. ಇದೆಲ್ಲಾ ಸೀತಾಪುರದ ಕಾಡಿಗಾಗಿಯಲ್ಲ, ಅಭಿವೃದ್ಧಿಗಾಗಿ ಎಂದು! ಮಾತನಾಡುತ್ತಾ ಇಬ್ಬರೂ ಶಾಸ್ತ್ರಿಗಳ ಮನೆಯ ಪಕ್ಕಕ್ಕೆ ಬಂದಿದ್ದರು. ಅಲ್ಲಿ ಮಾದ ಇದಿರಾದ.

ಮಾದನನ್ನು ನೋಡಿದ ನವ್ಯ, ಅವನ ಜೊತೆ ಜನ್ಮ ಜನ್ಮಾಂತರದ ಪರಿಚಯ ಇದ್ದ ರೀತಿಯಲ್ಲಿ 'ಓ ಮಾದ? ನಾನು ನಿಮ್ಮನ್ನೇ ಹುಡುಕುತ್ತಿದ್ದೆ' ಅಂದಳು.

ಮಾದ ಒಮ್ಮೆ ಆಶಾಳ ಮುಖ ನೋಡಿದ. ಒಮ್ಮೆ ನವ್ಯಳ ಮುಖ ನೋಡಿದ.

'ಏನಮ್ಮ, ನನ್ನನ್ನು ಯಾಕೆ ಹುಡುಕುತ್ತಾ ಇದ್ದೀರಿ?' ಎಂದು ಮುಜುಗರದಿಂದ ಪ್ರಶ್ನಿಸಿದ.

'ನಿಮ್ಮ ಪಂಜುರ್ಲಿ ಕೋಲ ನೋಡಿದೆ. ಏನು ವೇಷ, ಏನು ಕುಣಿತ, ಎಂತಹ ನುಡಿಗಟ್ಟು. ನಿಮ್ಮಂತಹ ಜಾನಪದ ಕಲಾಕಾರರನ್ನು ನಾನು ಎಲ್ಲೂ ನೋಡಿಲ್ಲ' ಎಂದಳು ನವ್ಯ.

ಮಾದನಿಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ. ಈಕೆಗೆ ತನ್ನ ಪಂಜುರ್ಲಿ ಕೋಲ ಇಷ್ಟವಾಗಿದೆ. ಆದರೆ ಈ 'ಜಾನಪದ ಕಲಾವಿದ' ಅಂದರೆ ಏನು? ಎಂದು ಅವನಿಗೂ ಗೊತ್ತಾಗಲಿಲ್ಲ.

'ಅಲ್ಲಮ್ಮ, ಈ ಜಾನಪದ ಕಲಾವಿದ ಅಂದ್ರೆ ಏನು?' ಅಂದ.

ನವ್ಯ ಹೇಳಿದಳು, 'ಭೂತ ಕಟ್ಟುವುದು ಒಂದು ಕಲೆ, ಆದ್ದರಿಂದ ನೀನು ಕಲಾವಿದ' ಎಂದು ವಿವರಿಸಿ ಹೇಳಿದಳು. ತನಗೆ ಒಮ್ಮೆ ಮಾದನನ್ನು ಪಂಜುರ್ಲಿಯ ವೇಷದಲ್ಲಿ ನೋಡಬೇಕು, ಅವನ ನರ್ತನ ವಿಡಿಯೊ ಮಾಡಬೇಕು ಎಂಬ ಮಾತನ್ನೂ ಆಡಿದಳು.

ಮಾದ 'ಅಮ್ಮ, ಈ ಭೂತ ಕಟ್ಟುವುದು ಉಂಟಲ್ಲ, ಅದು ವೇಷ ಹಾಕಿದ ಹಾಗೆ ಅಲ್ಲ. ನಿಜಕ್ಕೂ ದೈವದ ಮೇಲೆ ನಂಬಿಕೆ, ಭಕ್ತಿ ಇರಬೇಕಾಗುತ್ತದೆ. ಸುಮ್ಮನೆ ಕಲಾವಿದನ ಮೈಮೇಲೆ ದೈವ ಬರುವುದಿಲ್ಲ. ಇದನ್ನು ನಾವು ಕಲೆ ಗಿಲೆ ಎನ್ನುವುದಿಲ್ಲ. ನಾನು ಕಲಾವಿದನೂ ಅಲ್ಲ. ಇದು ಪಂಜುರ್ಲಿ, ನಮ್ಮ ದೈವ, ನನ್ನ ಮೈಮೇಲೆ ಬರ್ತದೆ, ಅಷ್ಟೇ' ಅಂದ.

ನವ್ಯ 'ಹೌದೇ' ಎನ್ನುತ್ತಾ ಕೇಳಿದರೂ ಕೇಳದಂತೆ ನಟಿಸುತ್ತಾ 'ನಾಳೆಯ ದಿನ ಪಂಜುರ್ಲಿಯ ವೇಷ ಹಾಕಲು ನಿನಗೆ ಸಾಧ್ಯವೇ?' ಎಂದು ಕೇಳಿದಳು.

ಮಾದ ಹೌಹಾರಿದ. ಪಂಜುರ್ಲಿಯ ವೇಷವೇ? ಅಬ್ಬಬ್ಬಾ... ಈ ಹುಡುಗಿಗೆ ವೇಷಕ್ಕೂ ಭೂತಕ್ಕೂ ಇರುವ ವ್ಯತ್ಯಾಸ ಗೊತ್ತಾಗುತ್ತಿಲ್ಲ. ಪಂಜುರ್ಲಿಯ ವೇಷ ಹಾಕಿದರೆ, ಅದರ ಫೋಟೊ/ವಿಡಿಯೊ ತೆಗೆದರೆ, ಪಂಜುರ್ಲಿಯಂತೇ ಕುಣಿದರೆ ಅದು ಪಂಜುರ್ಲಿ ದೈವ ಆಗುತ್ತದೆಯೇ? ಪಂಜುರ್ಲಿ ದೈವವಾಗಲು ಅಲ್ಲಿ ಪಂಜುರ್ಲಿಯ ಆವಾಹನೆ ಆಗಬೇಕು, ಪಂಜುರ್ಲಿಯನ್ನು ನಂಬುವವರು ಬೇಕು. ಇಲ್ಲವಾದರೆ ಅದು ಪಂಜುರ್ಲಿ ಕೋಲ ಆಗುವುದಿಲ್ಲ, ಕೇವಲ ಪಂಜುರ್ಲಿಯ ನಕಲಿ ವೇಷ ಆಗುತ್ತದೆ, ಪಂಜುರ್ಲಿಯ ನರ್ತನ ಆಗುತ್ತದೆ' ಅಂದ.

ನವ್ಯಳಿಗೆ ಹೇಗಾದರೂ ಮಾದನನ್ನು ಒಪ್ಪಿಸಿ ಪಂಜುರ್ಲಿ ವೇಷ ಹಾಕಿ ಕುಣಿಸಬೇಕಿತ್ತು.

'ನೋಡಿ ಮಾದ, ಈಗ ನೀವು ಏನೋ ಭಕ್ತಿಯಿಂದ ಪಂಜುರ್ಲಿ ಕೋಲ ಕಟ್ಟುತ್ತಿದ್ದೀರಿ, ಇನ್ನು ಮುಂದೆ ನಿಮ್ಮ ನಂತರದ ಜನಕ್ಕೆ ಪಂಜುರ್ಲಿ